ಐರೋಡಿಯಿಂದ ಹಿಡಿದು ಕೋಟದವರೆಗೆ ಅಲ್ಲಿನ ಪ್ರಧಾನ ಪಾತ್ರದ ಎಲ್ಲ ವಿವರಗಳಿಗೂ ನನ್ನ ಒಡನಾಟವಿತ್ತು. ಜೊತೆಗೆ 'ಚೋಮನ ದುಡಿ'ಯನ್ನೂ ಓದಿದ್ದೆ. ಆಮೇಲೆ ಕಾರಂತರ 'ಯಕ್ಷಗಾನ– ಬಯಲಾಟ' ಪ್ರಕಟವಾದ ಹದಿನೈದು ದಿನಗಳ ಒಳಗೇನೇ ಅದರದೊಂದು ಪ್ರತಿ ನೋಡಿದ್ದೆ. ನೋಡಿ ನಮಗೆಲ್ಲ ರೋಮಾಂಚನ. ಯಾಕಂದರೆ ನಾವು ನೋಡತಾ ಇದ್ದ ಯಕ್ಷಗಾನ ಇಷ್ಟು ದೊಡ್ಡ ಕಲೆಯಾ? ಕಾರಂತರು ಬರೆದಿದ್ದಾರಾ ಇದರ ಮೇಲೆ ಅಂತ. ಕೋಟದಲ್ಲಿ ಹೆಚ್ಚಿನವರು ಯಾರೂ ಕಾರಂತರನ್ನು ಓದಿಲ್ಲ. ಆದರೆ ಕಾರಂತರು ಅವರಿಗೆ ಹೀರೊ!

◆ **ಕಾರಂತರ ಬರಹಗಳಿಂದ ಓದು ಬೇರೆ ಲೇಖಕರಿಗೆ ಹೇಗೆ ಹೊರಳಿಕೊಂಡಿತು?**

ಮನೆಯಲ್ಲಿ ಕಿತ್ತು ತಿನ್ನುವ ಬಡತನವಿದ್ದರೂ ಓದಿಗೆ ಬಡತನ ಇರಲಿಲ್ಲ. ನಾನು ಓದಿದ್ದು ಮಣಿಪಾಲ್ ಹೈಸ್ಕೂಲಿನಲ್ಲಿ. ಮಣಿಪಾಲಿನಲ್ಲಿ ಒಂದು ಪಬ್ಲಿಕ್ ಲೈಬ್ರರಿಯಿತ್ತು. ಉಡುಪಿಯಲ್ಲಿ ಸರ್ಕಾರಿ ಲೈಬ್ರರಿಯಿತ್ತು. ಅವಕ್ಕೆ ಮೆಂಬರಾಗಿದ್ದೆ. ಉಡುಪಿಯ ರಥಬೀದಿಯಲ್ಲಿದ್ದ ಚಂದ್ರಮೌಳೇಶ್ವರ ಟೆಂಪಲ್‌ನ ಮಾಳಿಗೆಯ ಮೇಲೆ ಒಂದು ಲೈಬ್ರರಿಯಿತ್ತು – 'ಕಲಾವೃಂದ' ಅಂತ. ಅದರಲ್ಲಿ ಕನ್ನಡದ ಕಾದಂಬರಿಗಳಿದ್ದವು. ಅನಕೃ ತರಾಸು, ತ್ರಿವೇಣಿ, ನಿರಂಜನ, ಬೀಚಿ ಇವರ ಹೆಚ್ಚಿನ ಕಾದಂಬರಿಗಳನ್ನು ಅಲ್ಲಿ ಓದಿದೆ.

◆ **ನೀವು ಪಾಶ್ಚಿಮಾತ್ಯ ಸಾಹಿತ್ಯವನ್ನೂ ಬಹಳ ಓದಿಕೊಂಡಿದ್ದೀರಿ.**

ಇಂಗ್ಲಿಷ್‌ನಲ್ಲಿ ನನ್ನ ಓದು ಬಹಳ ಕಡಿಮೆ. ಎಂಜಿಎಂ ಕಾಲೇಜಿನಲ್ಲಿ ಸ್ಟೂಡೆಂಟ್ ಆದ ಮೇಲೆ ಹರಿದಾಸ ಭಟ್ಟರು ಲೈಬ್ರರಿಗೆ ಇಷ್ಟಪಟ್ಟು ಹಾಕಿಸಿದ ಕೆಲವು ಪುಸ್ತಕಗಳನ್ನು ಓದಿದ್ದಿದೆ. ಅದರಲ್ಲಿ 'ದ ಗಾಡ್ ದಟ್ ಫೈಲ್ಡ್' ಒಂದು. ಆಮೇಲೆ ಹರಿದಾಸ ಭಟ್ಟರು ಅನುವಾದಿಸಿದ ಇಗ್ನಾಶಿಯಸ್ ಲೊಯಲಾನ 'ಫೊಂತಮಾರ' ಓದಿದೆ. ಅರ್ಥರ್ ಕ್ರೆಸ್ಲರನನ್ನು ಓದಿದೆ. ಆರ್ವೆಲ್‌ನ ಎಲ್ಲ ಕೃತಿಗಳನ್ನು ಓದಿದೆ. ಮಾರ್ಕ್ವೆಜ್‌ನ ಎರಡು ಮೂರು ಕಾದಂಬರಿಗಳನ್ನು ಇಷ್ಟಪಟ್ಟು ಓದಿದೆ. ನನ್ನ ಓದಿಗೆ ಒಂದು ಕ್ರಮ ಅಂತ ಏನೂ ಇಲ್ಲ. ಕೈಗೆ ಸಿಕ್ಕಿದ್ದನ್ನೆಲ್ಲ ಓದಿದೆ. ಸುಮಾರು 30–40 ವರ್ಷದವರೆಗಿನ ಓದು ಏನಿದೆ, ಅಷ್ಟೇ ನಿಜವಾದ ಓದು. ಹಳೇ ಬಂಡವಾಳವನ್ನೇ ಬಳಸಿಕೊಂಡಿದೀನಿ. ಇದು ಇನ್ನೆಷ್ಟು ಕಾಲ ಬರುತ್ತೊ ಗೊತ್ತಿಲ್ಲ.

◆ **ಮತ್ತೆಮತ್ತೆ ಓದಿಸಿಕೊಂಡ ಕೃತಿ ಯಾವುದು?**

'ಅಳಿದ ಮೇಲೆ' ಓದಿದ್ದು ಆರನೆಯ ಸಲ ಇರಬೇಕು. 'ಮರಳಿ ಮಣ್ಣಿಗೆ'ಯನ್ನ ಏಳೆಂಟಕ್ಕಿಂತ ಜಾಸ್ತಿ ಸಲ ಓದಿರಬಹುದು. 'ಬೆಟ್ಟದ ಜೀವ', 'ಚೋಮನ ದುಡಿ'ಯನ್ನೂ ಹಾಗೇ ಓದಿದೀನಿ.

◆ **ಕುವೆಂಪು ಕೃತಿಗಳಲ್ಲಿ?**

'ಮಲೆಗಳಲ್ಲಿ ಮದುಮಗಳು' ಎರಡು ಮೂರು ಸಲ ಓದಿದೀನಿ. 'ಕಾನೂರು ಹೆಗ್ಗಡಿತಿ' ಓದಿದೀನಿ. ಅವರ ಕಾವ್ಯ ಪೂರ್ತಿ ಓದಿಲ್ಲ. ದಿ ಬೆಸ್ಟ್ ಎನ್ನುವಂತಹ 'ಕಲ್ಕಿ', 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಓದಿದೀನಿ. ನಮಗೆ 'ಪಕ್ಷಿಕಾಶಿ' ಟೆಕ್ಸ್ಟ್ ಆಗಿತ್ತು. ಅದನ್ನು ಈಚೆಗೆ ಪುನಃ ಓದಿದೆ. ಇದನ್ನು ಹೊಸ ಬೆಳಕಲ್ಲಿ ಓದೋಕೆ ಸಾಧ್ಯ ಇದೆ ಅಂತ ಅನಸ್ತು. ಅದರಲ್ಲಿ ಇದುವರೆಗೂ ಗಮನಿಸದೇ ಇರುವ ಬಹಳ ಒಳ್ಳೆಯ ರಚನೆಗಳಿದಾವೆ. ಕವಿಗೆ ಮನುಷ್ಯ ಮಾತ್ರ ಸ್ವ ಇರುವ ಜೀವವಲ್ಲ. ಗಿಡಮರಪಕ್ಷಿ ಎಲ್ಲದರಲ್ಲೂ ಒಂದು ಚೈತನ್ಯವಿದೆ.